ದಿನಾಂಕ: 19-01-2026 ರಂದು ಸಾಕ್ಷಿಯನ್ನು ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ.ಐ.ಡಿ.ಎಸ್ ವಕೀಲರಿಂದ**

1. ಬಸಪ್ಪ, ರಾಮಪ್ಪ, ಮಲ್ಲಪ್ಪ ಮತ್ತು ಭೀಮಪ್ಪ ಹೋಳೆಪ್ಪನವರ 1966 ರಲ್ಲಿ ನಿಡಿ-4 ರಂತೆ ವಾಟ್ನಿ ಮಾಡಿಕೊಂಡಿದ್ದರು ಎಂದರೆ ಸರಿ. ರಾಮಪ್ಪ, ಮಲ್ಲಪ್ಪ ಮತ್ತು ಭೀಮಪ್ಪರವರಿಗೆ ಸದರಿ ವಾಟ್ನಿಯಲ್ಲಿ ಸರ್ವೆ ನಂ.70/1, 70/2, 70/3, 70/1+2+3/6 ಮತ್ತು 72/2 ರಲ್ಲಿ ದಕ್ಷಿಣಕ್ಕಾದಂತೆ ಜಂಟಿಯಾಗಿ ಜಮೀನುಗಳು ಪಾಲಿಗೆ ಬಂದವು ಎಂದರೆ ಸರಿ. ನಿಡಿ -3 ರ ಪ್ರಕಾರ ನಿಡಿ-7 ರಂತೆ ನನ್ನ ತಂದೆಗೆ ಆಸ್ತಿಗಳು ಪಾಲಿಗೆ ಬಂದಿವೆ ಎಂದರೆ ಸರಿ. ನಿಡಿ-8 ರಂತೆ 1974 ರಲ್ಲಿ ನನ್ನ ತಂದೆ ನನ್ನ ಹೆಸರಿಗೆ ಹಕ್ಕು ಬಿಟ್ಟ ಪತ್ರ ಮಾಡಿಕೊಟ್ಟರು ಎಂದರೆ ಸರಿ. ಸದರಿ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ನನ್ನ ತಾಯಿಗೆ ಗೊತ್ತಿತ್ತು. ಸದರಿ ನಿಡಿ-8 ರಲ್ಲಿ ನನ್ನ ತಾಯಿ ನನ್ನ ತಂದೆಯ ಆಸ್ತಿ ನನಗೆ ಬಿಟ್ಟು ಕೊಡಲು ಅನುಮತಿ ಇದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಸದರಿ ಹಕ್ಕು ಬಿಟ್ಟು ಕೊಟ್ಟ ಬಗ್ಗೆ ನನ್ನ ಸಹೋದರಿಯಗೆ ಗೊತ್ತಿಲ್ಲ. ನನ್ನ ಸಹೋದರಿಯರು ಸದರಿ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಡಲು ಒಪ್ಪಿಗೆ ಪತ್ರ ಮಾಡಿಕೊಟ್ಟಿಲ್ಲ. ಸದರಿ ನಿಡಿ-8 ನ್ನು ನಾನೇ ತಯಾರಿಸಿ ಅದಕ್ಕೆ ನನ್ನ ತಂದೆಯ ಪಡೆದಿದ್ದೇನೆ ಎಂದರೆ ಸರಿಯಲ್ಲ.

2. ನಿಡಿ-8 ರಲ್ಲಿ ನನ್ನ ತಂದೆ ಬಿಟ್ಟು ಕೊಟ್ಟಿರುವ ಸರ್ವೆ ನಂ.151/1, 127/1+1 ಮತ್ತು ಸರ್ವೆ ನಂ.70/1+2 ನಮ್ಮ ಹಿರಿಯರ ಆಸ್ತಿಗಳು ಎಂದರೆ ಸರಿ. ಸದರಿ ಜಮೀನುಗಳು ನೀರಾವರಿ ಜಮೀನುಗಳು ಎಂದರೆ ಸಾಕ್ಷಿ ಸದರಿ ಜಮೀನು ಈಗ ನೀರಾವರಿ ಜಮೀನುಗಳು ಆಗಿವೆ ಮೊದಲು ನೀರಾವರಿ ಇರಲಿಲ್ಲ ಎನ್ನುತ್ತಾರೆ. ಸದರಿ ಜಮೀನುಗಳು ಯಾವ ವರ್ಷ ನೀರಾವರಿ ಆದವು ಎಂದು ದಾಖಲೆ ಹಾಜರಪಡಿಸಿಲ್ಲ. ಸದರಿ ಜಮೀನುಗಳನ್ನು ಹೊರತುಪಡಿಸಿ ನನಗೆ ಬೇರೆಯಾವದೇ ಆದಾಯದ

ಮೂಲಗಳು ಇಲ್ಲಾ ಎಂದರೆ ಸರಿ. ಸದರಿ ಆದಾಯದಿಂದ 25-02-1976 ರಂದು ಸರ್ವೆ ನಂ.57/1 ಮತ್ತು 57/2 ಜಮೀನುಗಳನ್ನು ಖರೀದಿಸಿದೆನು ಎಂದರೆ ಸರಿ. ಸದರಿ ಜಮೀನುಗಳನ್ನು ನಿಡಿ-12 ರಂತೆ ನಾನು ನನ್ನ ಮಗ ವಾಟ್ನಿ ಪತ್ರ ಮಾಡಿಕೊಂಡೆವು ಎಂದರೆ ಸರಿ. ನನಗೆ ಸಂಗೀತಾ ಎನ್ನುವ ಮಗಳು ಇದ್ದಾಳೆ ಎಂದರೆ ಸರಿ. ಸದರಿ ವಾಟ್ನಿ ಬಗ್ಗೆ ನನ್ನ ಮಗಳಿಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ವಾಟ್ನಿ ಬಗ್ಗೆ ನನ್ನ ಅಕ್ಕತಂಗಿಯರಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿಸಿರುವ ಜಮೀನುಗಳು ನಮ್ಮ ಹಿರಿಯರ ಆಸ್ತಿಯಿಂದ ಬಂದ ಆದಾಯದಿಂದ ಖರಿದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಜಮೀನುಗಳ ಆದಾಯ ಹೊರತುಪಡಿಸಿ ಬೇರೆ ಆದಾಯದ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿಲ್ಲ.

3. ನಾನು ಹಾಜರಪಡಿಸಿರುವ ಒಟ್ಟು ದಾಖಲೆಗಳು ಯಾವುದಕ್ಕೆ ಸಂಬಂಧಪಟ್ಟ ದಾಖಲೆ ಗೊತ್ತಿಲ್ಲ. ನಾನು ನನ್ನ ಮಕ್ಕಳ ಜೊತೆ ಸಂಗನಮತ ಮಾಡಿಕೊಂಡು ನನ್ನ ಸಹೋದರಿಯರಿಗೆ ಪಾಲು ಕೊಡಬಾರದು ಎಂದು ಸತ್ಯ ಸಂಗತಿ ಮುಚ್ಚಿಟ್ಟು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನಾನು ಮಾಡಿಕೊಂಡಿರುವ ವಾಟ್ನಿ ಪತ್ರಗಳು ವಾದಿಗಳಿಗೆ ಬಂಧನ ಕಾರಿ ಇಲ್ಲಾ ಎಂದರೆ ಸರಿಯಲ್ಲ. ವಾದಿಯರಿಗೆ ಪಾಲು ಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ